UNIVERSITY LIBRARY
SATUDAY 11-10-2025
Agri Newspaper Clippings
For more information visit University Library Website
Web - uasbagrilibindia.org
E-mail- librarian@uasbangalore.edu.in

ಬೆಳೆಗಾರರಿಗೆ ಸಿಗಲಿದೆ ಹೆಚ್ಚಿನ ಆದಾಯ | ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಸರ್ಕಾರಕ್ಕೆ ಶೀಘ್ರ ಪ್ರಸ್ತಾವನೆ ಸಲ್ಲಿಕೆ

ಅಣಬೆ ಬೇಸಾಯ ಮಾರಾಟ ಉತ್ತೇಜನಕ್ಕೆ ಎಫ್‌ಪಿಒ

■ ಆರ್. ತುಳಸಿಕುಮಾರ್ ಬೆಂಗಳೂರು

ಪೋಷಕಾಂಶಯುಕ್ತ ಆಹಾರ ಎನಿಸಿರುವ ಅಣಬೆ ಕೃಷಿ ಹಾಗೂ ಮಾರುಕಟ್ಟೆ ವಿಸ್ತರಿಸಿ ಬೆಳೆಗಾರರಿಗೆ ಹೆಚ್ಚಿನ ಆದಾಯ ಒದಗಿಸುವ ನಿಟ್ಟಿನಲ್ಲಿ ಹೊಸದಾಗಿ ರೈತ ಉತ್ಪಾದಕ ಸಂಘಗಳನ್ನು (ಎಫ್‌ಪಿಒ) ಸ್ಥಾಪಿಸಲು ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಸರ್ಕಾರಕ್ಕೆ ಶೀಘ್ರ ಪ್ರಸ್ತಾವನೆ ಸಲ್ಲಿಸಲಿದೆ.

ಅಣಬೆ ಬೇಸಾಯದ ಮೂಲಕ ರೈತರು ಹಾಗೂ ಯುವಜನರಿಗೆ ಉದ್ಯೋಗ ಒದಗಿಸಲು ವಿವಿಯಿಂದ ತರಬೇತಿ ನಡೆಸಲಾಗುತ್ತಿದೆ. ಹೊಸ ತಂತ್ರಜ್ಞಾನ ಬಳಸಿಕೊಂಡು ಮೌಲ್ಯವರ್ಧನೆ ಒತ್ತು ನೀಡುವ ಉದ್ದೇಶದಿಂದ ಮಾರುಕಟ್ಟೆ ಜಾಲವನ್ನು ವಿಸ್ತರಿಸಲು ವಿವಿಧ ಸಂಘಟನೆಗಳ ಜತೆ ಒಡಂಬಡಿಕೆ ಮಾಡಿಕೊಳ್ಳಲು ಮಾರ್ಗದರ್ಶನ ನೀಡಲಾಗುತ್ತಿದೆ. ಈ ಎಲ್ಲ ಅಂಶಗಳನ್ನು ಒಟ್ಟುಗೂಡಿಸಿ ಅಣಬೆ ಕೃಷಿಗೆ ಉದ್ದಿಮೆಯ ಸ್ಥಾನಮಾನ ನೀಡಿದ್ದಲ್ಲಿ ಬೆಳೆಗಾರರಿಗೆ ಹೆಚ್ಚಿನ ಲಾಭ ದೊರೆತು ರಫ್ತಿಗೂ ಅವಕಾಶ ದೊರೆಯಲಿದೆ. ಹಾಗಾಗಿ ಅಣಬೆ ಕೃಷಿಗೆಂದೇ ಪ್ರತ್ಯೇಕ ಎಫ್‌ಪಿಒ ಆರಂಭಿಸಲು ಸಿದ್ಧತೆ ನಡೆದಿದೆ ಎಂದು ಕೃಷಿ ವಿವಿ ಅಧಿಕಾರಿಗಳು ತಿಳಿಸಿದ್ದಾರೆ.

ಸದ್ಯ ಕೃಷಿ ವಿವಿಯಲ್ಲಿ ಅಣಬೆ ಕೃಷಿ ಕುರಿತು ಪ್ರತ್ಯೇಕ ವಿಭಾಗ ಕಾರ್ಯಾಚರಿಸುತ್ತಿದೆ. ಈ ವಿಭಾಗವೂ 1979ರಿಂದಲೂ ಸಂಶೋಧನೆಯಲ್ಲಿ ನಿರತವಾಗಿದೆ. ಇದರ ಫಲವಾಗಿ ಕೃಷಿ ವಿದ್ಯಾರ್ಥಿಗಳಿಗೆ ಮಶ್ರೂಮ್ ಬೆಳೆಯುವ ಕುರಿತು ಪ್ರಾತ್ಯಕ್ಷಿಕೆ ಸಹಿತ ತರಬೇತಿ ನೀಡಲಾಗುತ್ತಿದೆ. ಇದು ಪದವೀಧರರು ಕೋರ್ಸ್ ಮುಗಿದ ಬಳಿಕ ಸ್ವಯಂ ಉದ್ಯೋಗ ಕಂಡುಕೊಳ್ಳಲು ನೆರವಾಗುತ್ತಿದೆ. ದೊಡ್ಡ ಮಟ್ಟದ ಉದ್ದಿಮೆ ಸ್ಥಾಪಿಸಲು ಅವಕಾಶ ಇರುವುದರಿಂದ ಬ್ಯಾಂಕ್ ಸಾಲ, ಸರ್ಕಾರದ ಸಹಾಯಧನ, ಗುಣಮಟ್ಟ ಪರೀಕ್ಷೆ, ಪ್ರಯೋಗಾಲಯ ಸೇರಿ ತಾಂತ್ರಿಕ ನೆರವನ್ನು ಬೆಳೆಗಾರರಿಗೆ ಒದಗಿಸಲು ಸರ್ಕಾರದ ಕಾರ್ಯಕ್ರಮಗಳನ್ನು ರೂಪಿಸಲು ಸಾಧ್ಯವಾಗಲಿದೆ ಎಂದು ವಿವಿ ಅಧಿಕಾರಿಗಳು ಪ್ರತಿಪಾದಿಸಿದ್ದಾರೆ.



ದಕ್ಷಿಣ ಭಾರತದಲ್ಲಿ ಬೇಡಿಕೆ ಹೆಚ್ಚು

ಪ್ರಸ್ತುತ ದೇಶದಲ್ಲಿ ಅಣಬೆ ಉತ್ಪನ್ನ ಬೇಡಿಕೆಯಷ್ಟು ಗ್ರಾಹಕರಿಗೆ ತಲುಪಿಸಲಾಗುತ್ತಿದೆ. ಹೊಸ ತಂತ್ರಜ್ಞಾನ, ತಾಂತ್ರಿಕತೆ, ನೈರ್ಮಲ್ಯ, ಕೋಲ್ಡ್ ಸ್ಟೋರೇಜ್ ಕೇಂದ್ರದ ಸೌಲಭ್ಯ ಸಾಕಷ್ಟಿಲ್ಲ. ಇದರಿಂದ ಹೊಸದಾಗಿ ಉದ್ಯಮ ಆರಂಭಿಸಲು ಸಾಧ್ಯವಾಗುತ್ತಿಲ್ಲ. ಆದರೂ ದೇಶದ ವಿವಿಧ ಭಾಗಗಳಿಗಿಂತ ದಕ್ಷಿಣ ಭಾರತದಲ್ಲಿ ಅಣಬೆ ಜನಪ್ರಿಯ ಉತ್ಪನ್ನವಾಗಿದ್ದು, ಬೆಂಗಳೂರು ಮುಂಚೂಣಿಯಲ್ಲಿದೆ. ಇಡೀ ದೇಶದಲ್ಲಿ ಮಶ್ರೂಮ್ ಖಾದ್ಯಗಳಲ್ಲಿ ಹೆಚ್ಚಿನ ವೆರೈಟಿ ಸಿಗುವುದು ಬೆಂಗಳೂರಿನಲ್ಲಿಯೇ ಎಂಬುದು ಕಾತರಿಯಾಗಿದೆ. ಆದರೆ, ಸ್ಥಳೀಯವಾಗಿ ಆಗತ್ಯ ಅಣಬೆ ಸಿಗದ ಕಾರಣ ಗೋವಾ, ಪುಣೆಯಿಂದ ತರಿಸಿಕೊಳ್ಳಲಾಗುತ್ತಿದೆ. ಎಫ್‌ಪಿಒ ಸ್ಥಾಪನೆಯಾದಲ್ಲಿ ಕರ್ನಾಟಕದಾದ್ಯಂತ ಅಣಬೆ ಕೃಷಿಗೆ ಅಧಿಕ ಮನ್ನಣೆ ಸಿಗಲಿದೆ.



ಭಾರತವು ಜನರಿಗೆ ಪೌಷ್ಟಿಕಾಂಶ ಆಹಾರ ನೀಡುವ ವಿಷಯದಲ್ಲಿ ಪೂರ್ಣ ಸಫಲತೆ ಕಂಡಿಲ್ಲ. ಅಣಬೆಯು ಪೋಷಕಾಂಶದ ಆಗರವಾಗಿದ್ದು, ಶುಚಿ- ರುಚಿ ತಿನಿಸಾಗಿ ಸೇವಿಸಲು ಉತ್ತಮ ಖಾದ್ಯವಾಗಿದೆ. ಮುಂದಿನ ಕೃಷಿ ಮೇಳದಲ್ಲಿ ಅಣಬೆ ತಿನಿಸುಗಳಿಗೆ ಪ್ರತ್ಯೇಕ ಮಳಿಗೆ ಹಾಕಲು ಅವಕಾಶ ನೀಡಲಾಗುವುದು.

| ಡಾ. ಎಸ್.ವಿ. ಸುರೇಶ್ ಬೆಂ.ಕೃಷಿ ವಿವಿ ಕುಲಪತಿ

ಒಡಂಬಡಿಕೆ

ಅಣಬೆ ಮಾರಾಟ ಜಾಲವನ್ನು ವಿಸ್ತರಿಸಿ ಬೆಳೆಗಾರರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಕೃಷಿ ವಿವಿಯು ಖಾಸಗಿ ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ವೇದಿಕೆ ರೂಪಿಸುತ್ತಿದೆ. ರೈತರಿಗೆ ಮೊದಲ ಆದ್ಯತೆ ನೀಡುತ್ತಿದ್ದು, ಇತರ ಬೆಳೆಗಾರರಿಗೂ ಅವಕಾಶ ಮಾಡಿಕೊಡಲಾಗುತ್ತದೆ. ಮುಂದಿನ ನ.3ರಿಂದ ಐದು ದಿನ ನಡೆಯಲಿರುವ ಜಾಗತಿಕ ಅಣಬೆ ಸಮ್ಮೇಳನದ ವೇಳೆಗೆ 8-10 ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಪ್ರಯತ್ನ ಸಾಗಿದೆ. ಇದು ಸಫಲವಾದಲ್ಲಿ ನಿರಂತರವಾಗಿ ಒಡಂಬಡಿಕೆಗೆ ಉತ್ತೇಜನ ನೀಡಲಾಗುವುದು ಎಂದು ಕೃಷಿ ವಿವಿಯ ಅಣಬೆ ವಿಭಾಗದ ಮುಖ್ಯಸ್ಥ ಡಾ. ಉಮಾಶಂಕರ್ ತಿಳಿಸಿದ್ದಾರೆ.

200 ವಿಧದ ಅಣಬೆ ಲಭ್ಯ

ವಿಶ್ವದಲ್ಲಿ 2 ಸಾವಿರ ಬಗೆಯ ಅಣಬೆಗಳು ಕಾಣಸಿಗುತ್ತವೆ. ಈ ಪೈಕಿ 200 ವಿಧದ ಅಣಬೆ ಮನುಷ್ಯರ ಸೇವನೆಗೆ ಲಭ್ಯವಿದ್ದು, ಭಾರತದಲ್ಲಿ 100ಕ್ಕೂ ಹೆಚ್ಚು ಬಗೆಯವು ಬಳಕೆಯಲ್ಲಿದೆ. ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರ (ಐಐಎಚ್‌ಆರ್) ಅಣಬೆ ಬೇಸಾಯದ ತಾಂತ್ರಿಕತೆ ಜತೆಗೆ ನವೀನ ಮಾದರಿಯಲ್ಲಿ ಬೆಳೆಸುವ ವಿಧಾನಗಳನ್ನು ಕಂಡುಹಿಡಿದಿದೆ. ಹುಳಿಮಾವಿನಲ್ಲಿರುವ ತೋಟಗಾರಿಕೆ ಕೇಂದ್ರ ಕೂಡ ಬಣ್ಣದ ಮಶ್ರೂಮ್ ತಳಿಗಳನ್ನು ಶೋಧಿಸಿ ಮಾರುಕಟ್ಟೆಗೆ ಪರಿಚಯಿಸಿದೆ.

Vijayavani pg 05

ಪದವೀಧರರೇ ಕೃಷಿ ವಿವಿ ರಾಯಭಾರಿಗಳು

ಡಾ. ಜಿ. ಪರಮೇಶ್ವರ್ ಅಭಿಮತ | ಯುಎಎಸ್‌ಬಿ 60ನೇ ಸಂಸ್ಥಾಪನಾ ದಿನಾಚರಣೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ (ಯುಎಎಸ್‌ಬಿ) ವಿದ್ಯಾಭ್ಯಾಸ ಮಾಡಿ ಹೊರಬರುವ ಪದವೀಧರರೇ ಈ ವಿವಿಯ ನೈಜ ರಾಯಭಾರಿಗಳು ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದ್ದಾರೆ.

ಜಿಕೆವಿಕೆ ಕ್ಯಾಂಪಸ್‌ನ ಡಾ. ಬಾಬು ರಾಜೇಂದ್ರ ಪ್ರಸಾದ್ ಭವನದಲ್ಲಿ ಗುರುವಾರ ಆಯೋಜಿಸಿದ್ದ ವಿವಿಯ 60ನೇ ಸಂಸ್ಥಾಪನಾ ದಿನಾಚರಣೆ, ಜಲಾನಯನ ನಿರ್ವಹಣೆಯ ಉತ್ಕೃಷ್ಟ ಕೇಂದ್ರದ ನವೀಕರಿಸಿದ ಕಟ್ಟಡ ಹಾಗೂ ಸೂಕ್ಷ್ಮ ನೀರಾವರಿ ಪರಿಕರಗಳ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯ ಉದ್ಘಾಟಿಸಿ ಮಾತನಾಡಿದರು.

ದೇಶದ 75 ಕೃಷಿ ವಿವಿಗಳಲ್ಲಿ ಯುಎಎಸ್‌ಬಿ 11ನೇ ಸ್ಥಾನದಲ್ಲಿದೆ. ನ್ಯಾಕ್ ಸಂಸ್ಥೆಯಿಂದ 'ಎ' ಪ್ಲಸ್ ಶ್ರೇಣಿ ಪಡೆದುಕೊಂಡಿದೆ. ಎನ್‌ಐಆರ್‌ಎಫ್ ರ‍್ಯಾಂಕಿಂಗ್‌ನಲ್ಲೂ 11ನೇ ಸ್ಥಾನ ದೊರೆತಿದೆ. ಕೃಷಿ ವಿವಿ 60 ವರ್ಷ ನಡೆದುಬಂದ ದಾರಿ ಸುಗಮವಾಗಿರಲಿಲ್ಲ. ಹಲವರ ಶ್ರಮ ಹಾಗೂ ತ್ಯಾಗದ ಫಲವಾಗಿ ಇಂದು ಬೃಹತ್ ಸಂಸ್ಥೆಯಾಗಿ ಬೆಳೆದುನಿಂತಿದೆ. ಇಲ್ಲಿ ಕಲಿತ ಅನೇಕರು ದೇಶದ ವಿವಿಧ ವಿವಿಗಳಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಸರ್ಕಾರಿ ನೌಕರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಉನ್ನತ ಸ್ಥಾನದಲ್ಲಿರುವುದು ಹೆಮ್ಮೆಯ ಸಂಗತಿ ಎಂದರು.

ಭವಿಷ್ಯದ ತಂತ್ರಜ್ಞಾನಕ್ಕೆ ಒತ್ತು ನೀಡಿ: ಬೆಂ. ಕೃಷಿ ವಿವಿ ಕೃಷಿ ಶಿಕ್ಷಣ, ಸಂಶೋಧನೆ ಹಾಗೂ ವಿಸ್ತರಣಾ ಚಟುವಟಿಕೆಗಳ ಮೂಲಕ ರೈತರಿಗೆ ಶಕ್ತಿ ತುಂಬುವ ಜತೆಗೆ ರಾಷ್ಟ್ರವು ಸಮೃದ್ಧಿಯತ್ತ ಹೆಜ್ಜೆ ಇರಿಸಲು ಅವಿರತವಾಗಿ ಶ್ರಮಿಸುತ್ತಿದೆ. ಮುಂದಿನ ದಿನಗಳಲ್ಲಿ ಡ್ರೋನ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಹಾಗೂ ಡಿಜಿಟಲ್ ಕೃಷಿಗೆ ಹೆಚ್ಚಿನ ಒತ್ತು ನೀಡಿ ನವೀನ ಆವಿಷ್ಕಾರವನ್ನು ಅನ್ನದಾತರಿಗೆ ತಲುಪಿಸಬೇಕು ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಸಲಹೆ ನೀಡಿದರು.

ಕೇಂದ್ರದ ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಡಾ. ಮಂಗಿಲಾಲ್ ಜಾಟ್, ಜಲಾನಯನ ಅಭಿವೃದ್ಧಿ ಇಲಾಖೆಯ ಆಯುಕ್ತ ಉಪೇಂದ್ರ ಪ್ರತಾಪ್ ಸಿಂಗ್, ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್, ಕುಲಸಚಿವ ಡಾ. ಕೆ.ಸಿ. ನಾರಾಯಣಸ್ವಾಮಿ ಮತ್ತಿತರರಿದ್ದರು.



ವಿಜಯವಾಣಿ ಚಿತ್ರ

ಜಿಕೆವಿಕೆಯಲ್ಲಿ ಆಯೋಜಿಸಿದ್ದ ಯುಎಎಸ್‌ಬಿಯ 60ನೇ ಸಂಸ್ಥಾಪನಾ ದಿನಾಚರಣೆಯನ್ನು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಉದ್ಘಾಟಿಸಿದರು. ಕೃಷಿ ಸಚಿವ ಚಲುವರಾಯಸ್ವಾಮಿ, ವಿವಿಯ ಕುಲಪತಿ ಡಾ. ಎಸ್.ವಿ. ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

ಸಾಧಕರಿಗೆ ಪ್ರಶಸ್ತಿ ಪ್ರದಾನ

ವಿದ್ಯಾರ್ಥಿಗಳು, ಶಿಕ್ಷಕರು, ವಿಜ್ಞಾನಿಗಳು, ವಿಸ್ತರಣಾ ಕಾರ್ಯಕರ್ತರು ಹಾಗೂ ಬೋಧಕ/ ಬೋಧಕೇತರ ಸಿಬ್ಬಂದಿಯ ಅತ್ಯುತ್ತಮ ಕೊಡುಗೆ ಪರಿಗಣಿಸಿ ಒಟ್ಟು 96 ಮಂದಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಹೆಸರಘಟ್ಟದ ಐಐಎಚ್‌ಆರ್ ಸಂಸ್ಥೆಯ ಹಿರಿಯ ವಿಜ್ಞಾನಿ ಡಾ. ಜಿ. ಕರುಣಾಕರನ್, ಶಿವಮೊಗ್ಗದ ತೋಟಗಾರಿಕಾ ವಿವಿಯ ಪ್ರಾಧ್ಯಾಪಕ ಡಾ. ನಾಗರಾಜಪ್ಪ ಅಡಿವಪ್ಪರ್, ಜಿಕೆವಿಕೆಯ ಸಹಾಯಕ ಪ್ರಾಧ್ಯಾಪಕ ಡಾ. ಎಚ್.ಬಿ. ಮಹೇಶ್, ಮೈಸೂರು ನಾಗೇನಹಳ್ಳಿ ಕೇಂದ್ರದ ಪ್ರಾಧ್ಯಾಪಕ ಡಾ. ಸಿ. ರಾಮಚಂದ್ರ, ಕುಣಿಗಲ್‌ನ ಕೃಷಿ ಸಂಶೋಧನಾ ಕೇಂದ್ರದ ಡಾ. ಕೆ.ಆರ್. ಶ್ರೀನಿವಾಸ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕನ್ನಡ ಕೃಷಿ ಪುಸ್ತಕ ಪ್ರಶಸ್ತಿಯನ್ನು ವಿಜಯಪುರ ಮೀನುಗಾರಿಕೆ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ. ಎಸ್. ವಿಜಯಕುಮಾರ್, ಮಂಗಳೂರು ಮೀನುಗಾರಿಕೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಗಣೇಶ್ ಪ್ರಸಾದ್ ಹಾಗೂ ಡಾ. ವಿಜಯ ಎಸ್. ಅತನೂರ್ ಅವರಿಗೆ ನೀಡಲಾಯಿತು.

ಕಪ್ಪೆಚಿಪ್ಪುಗಳಿಂದ ಸಿಹಿ ನೀರಲ್ಲಿ ಮುತ್ತು ಉತ್ಪಾದಿಸುವ ಕೃಷಿ

ಮನೆಯಲ್ಲೇ ಮುತ್ತು ಉತ್ಪಾದಿಸಿ

▸ ದೇವಿತಾ ಸಿ.ಎಸ್





• **ಬೆಂಗಳೂರು:** ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು ಎಂಬ ಗಾದೆ ಮಾತಿದೆ. ಅದರಂತೆ ಮುತ್ತು ಕೇವಲ ಸಮುದ್ರದಲ್ಲಿ ಮಾತ್ರ ಸಿಗುವುದಿಲ್ಲ. ಬಯಸಿದರೆ ನಿಮ್ಮ ಮನೆಯ ಕೊಳದಲ್ಲಿಯೂ ಮುತ್ತು ಕೃಷಿ ಮಾಡಬಹುದಾಗಿದೆ.

ವಿಶೇಷ

ಮುತ್ತು ಎಂದರೆ ಬರೀ ಸಮುದ್ರದಲ್ಲಿ ಮಾತ್ರ ಸಿಗುವಂತಹ ಅಪರೂಪದ ವಸ್ತು ಎಂದು ನಾವೆಲ್ಲರೂ ತಿಳಿದುಕೊಂಡಿರುತ್ತೇವೆ. ಆದರೆ, ಇಂದಿನ ದಿನಗಳಲ್ಲಿ ಕೃಷಿಯಲ್ಲಿ ಹಲವಾರು ಬೆಳವಣಿಗೆಗಳಾಗಿದ್ದು, ಆಧುನಿಕ ತಂತ್ರಜ್ಞಾನ ಕೃಷಿಯಲ್ಲಿ ಹಾಸುಹೊಕ್ಕಾಗಿದೆ. ಅನೇಕ ರೀತಿಯ ಪ್ರಯೋಗಗಳು ಕೃಷಿಯಲ್ಲಿ ನಡೆಯುತ್ತಲೇ ಇರುತ್ತವೆ. ಅದಕ್ಕೆ ಹೊಸ ಸೇರ್ಪಡೆ ಮುತ್ತು ಕೃಷಿ ವಿಧಾನ. ನೀವು ಬಯಸಿದರೆ ನಿಮ್ಮ ಮನೆ ಕೊಳದಲ್ಲೂ ಮುತ್ತು ಕೃಷಿ ಮಾಡಬಹುದಾಗಿದೆ. ಪ್ರಸಕ್ತ ತಂತ್ರಜ್ಞಾನ, ವಿಜ್ಞಾನದ ಬಳಕೆಯಿಂದಾಗಿ ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತಿವೆ. ಪುಟ ೭

ಶೇ.90 ಲಾಭ ಗಳಿಕೆ ಸಾಧ್ಯ

ರೈತರು ಸರಿಯಾದ ತರಬೇತಿ ಮತ್ತು ವೈಜ್ಞಾನಿಕವಾದ ಸಾಕಾಣಿಕೆ ಪದ್ಧತಿಗಳ ಅಳವಡಿಸಿಕೊಂಡರೆ ತಮ್ಮ ಆರಂಭಿಕ ಹೂಡಿಕೆಯಲ್ಲಿ ಶೇ.60 ರಿಂದ 90ರಷ್ಟು ಲಾಭಗಳಿಸಬಹುದು. ಇತರೆ ಕೃಷಿ ಉದ್ಯಮಗಳಿಗೆ ಹೋಲಿಸಿದರೆ ಮುತ್ತು ಸಾಕಾಣಿಕೆಗೆ ಕಡಿಮೆ ಮಟ್ಟದ ಆಹಾರ, ಕಾರ್ಮಿಕ ಮತ್ತು ಮೂಲಸೌಕರ್ಯ ಅಗತ್ಯವಿರುತ್ತದೆ. ಹೆಚ್ಚುವರಿ ಆದಾಯದ ಮೂಲಗಳಿಗಾಗಿ ಮುತ್ತು ಕೃಷಿಯನ್ನು ಇತರೆ ಮೀನುಗಳ ಕೃಷಿಯೊಂದಿಗೆ ಸಂಯೋಜಿಸಬಹುದಾಗಿದೆ.

ಅ.14ರಿಂದ 3 ದಿನ ತರಬೇತಿ

• ಪುಟ ೭

ಮನೆಯಲ್ಲೇ ಮುತ್ತು ಉತ್ಪಾದಿಸಿ

ಪುಟ ೧ ➡ ಹೆಬ್ಬಾಳದಲ್ಲಿರುವ ಕೃಷಿ ವಿಶ್ವವಿದ್ಯಾಲಯ ಜಿಕೆವಿಕೆಯು ಹೊಸತರದ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿ ರೈತರಿಗೆ ಪರಿಚಯಿಸುತ್ತಲ್ಲೇ ಇರುತ್ತದೆ. ಪ್ರಸಕ್ತ ಕಪ್ಪೆಚಿಪ್ಪುಗಳ ಸಹಾಯದಿಂದ ಸಿಹಿ ನೀರಿನಲ್ಲಿ ಮುತ್ತನ್ನು ಉತ್ಪಾದಿಸುವ ಕೃಷಿಯ ಕುರಿತು ಆಸಕ್ತರಿಗೆ ಕೃಷಿ ವಿವಿಯ ತರಬೇತಿ ನೀಡುತ್ತಿದೆ.

9ರಿಂದ 11 ತಿಂಗಳಲ್ಲಿ ಮುತ್ತು ಉತ್ಪಾದನೆ: ಸಿಹಿನೀರು ಮುತ್ತು ಕೃಷಿಯಲ್ಲಿ ಎಷ್ಟು ಪ್ರಬೇಧಗಳಿವೆ. ಸಂತಾನೋತ್ಪತ್ತಿ, ಆಹಾರಾಭ್ಯಾಸ, ಕೃತಕವಾಗಿ ಮುತ್ತು ಬಳಕೆ ಹೇಗೆ ಮಾಡಬೇಕು ಎಂಬ ವಿಧಾನಗಳ ಬಗ್ಗೆ ತರಬೇತಿಯಲ್ಲಿ ಹೇಳಿಕೊಡಲಾಗುತ್ತದೆ. 3 ಸಾವಿರ ಲೀಟರ್ ತೊಟ್ಟಿಯಲ್ಲಿ 300ರಷ್ಟು ಕಪ್ಪೆಚಿಪ್ಪು ಇರಿಸಿ, 9 ರಿಂದ 11 ತಿಂಗಳ ಅವಧಿಯಲ್ಲಿ ಶೇ.50 ರಷ್ಟು ಮುತ್ತನ್ನು ತಯಾರಿಸಬಹುದಾಗಿದೆ.

ಅಕ್ಟೋಬರ್ ಉತ್ತಮ ಸಮಯ: ಮುತ್ತು ಕೃಷಿಯನ್ನು ಪ್ರಾರಂಭಿಸಲು ಅಕ್ಟೋಬರ್‌ನಿಂದ ಡಿಸೆಂಬರ್ ಉತ್ತಮ ಸಮಯವಾಗಿದೆ. ಈ ಅವಧಿಯು ಆರೋಗ್ಯಕರ ಕಪ್ಪೆಚಿಪ್ಪುಗಳ ಬೆಳವಣಿಗೆ ಮತ್ತು ಸಂಪೂರ್ಣ ಪ್ರಮಾಣದ ಮುತ್ತು ರಚನೆಗೆ ಬೇಕಾಗುವ ನೀರಿನ ತಾಪಮಾನ ಮತ್ತು ಪರಿಸರವಿರುತ್ತದೆ. ಈ ಸ್ಥಿರವಾದ ತಾಪಮಾನವು ಕಪ್ಪೆಚಿಪ್ಪುಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ. ಜತೆಗೆ ತಂಪಾದ ಹವಾಮಾನವು ಬ್ಯಾಕ್ಟೀರಿಯಾದ ಬೆಳವಣಿಗೆ ಮತ್ತು ನೀರಿನ ಮಾಲಿನ್ಯವನ್ನು ಕಡಿಮೆ ಮಾಡುತ್ತದೆ.

ಅ.14ರಿಂದ 3ದಿನ ತರಬೇತಿ

ಹೆಬ್ಬಾಳದ ಜಿಕೆವಿಕೆಯ ಒಳನಾಡು ಮೀನುಗಾರಿಕೆ ಘಟಕದ ವತಿಯಿಂದ ಅ.14ರಿಂದ 16ರವರೆಗೆ ಮೂರು ದಿನಗಳ ಶುಲ್ಕ ಸಹಿತ ಕೌಶಲ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಮೂರು ದಿನಗಳ ತರಬೇತಿ ಕಾರ್ಯಾಗಾರದಲ್ಲಿ ಸಿಹಿನೀರಿನ ಕಪ್ಪೆಚಿಪ್ಪಿನ ಆಯ್ಕೆ, ಸಾಗಾಣಿಕೆ, ನ್ಯೂಕ್ಲಿಯಸ್ ಇಂಪ್ಲಾಆಟೇಶನ್ ಮತ್ತು ಮುತ್ತು ಕೊಯ್ಲು ಒಳಗೊಂಡ ತಂತ್ರಜ್ಞಾನದ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಆಸಕ್ತರು ತರಬೇತಿ ಶುಲ್ಕ 5,500 ರೂ. ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 9980983345 ಸಂಪರ್ಕಿಸಬಹುದಾಗಿದೆ.

ಸಿಹಿನೀರಿನ ಮುತ್ತು ಕೃಷಿಯು ಸುಸ್ಥಿರ ಮತ್ತು ಆರ್ಥಿಕವಾಗಿ ಪ್ರಯೋಜನಕಾರಿ ಕೃಷಿಯಾಗಿದ್ದು, ಇದು ಗ್ರಾಮೀಣ ಆರ್ಥಿಕತೆಯನ್ನು ಪುನರುಜ್ಜೀವನಗೊಳಿಸುವ ಜತೆಗೆ ಜಲಚರ ಸಾಕಣೆಯನ್ನು ಉತ್ತೇಜಿಸಿ, ಗ್ರಾಮೀಣ ಜನರ ಜೀವನೋಪಾಯವನ್ನು ಆರ್ಥಿಕವಾಗಿ ಸದೃಢಗೊಳಿಸುತ್ತದೆ.

■ ಡಾ. ಹರ್ಷ ನಾಯಕ್, ಮುಖ್ಯಸ್ಥರು ಒಳನಾಡು ಮೀನುಗಾರಿಕೆ ಘಟಕ, ಜಿಕೆವಿಕೆ

Hosadiganta pg 04



■ **ದೂರದರ್ಶನ:** ಚಂದನ ವಾಹಿನಿ ಹಾಗೂ ಕೃಷಿ ವಿಶ್ವವಿದ್ಯಾಲಯ ಬೆಂಗಳೂರು ಸಹಯೋಗದಲ್ಲಿ 'ಥಟ್ ಅಂತಾ ಹೇಳಿ' 5000 ಸರಣಿ ಸಂಚಿಕೆ ಕಾರ್ಯಕ್ರಮ. ಅತಿಥಿಗಳು : ರಾಜ್ಯಪಾಲ ಥಾವರ್‌ಚಂದ್ ಗೆಹಲೊತ್, ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ, ಗಾಂಧಿ ಭವನ ಅಧ್ಯಕ್ಷ ವೂಡೇ ಪಿ. ಕೃಷ್ಣ ಬೆಂಗಳೂರು ಕುಕೃಷಿ ವಿವಿ ಕುಲಪತಿ ಡಾ. ಎಸ್. ವಿ. ಸುರೇಶ್, ಪರಿಸರ ತಜ್ಞೆ ರೇವತಿ ಕಾಮತ್, ಕಲಬುರಗಿ ವಿವಿ ಕುಲಪತಿ ಪ್ರೊ. ಶಶಿಕಾಂತ್ ಎಸ್. ಉಡಿಕೇರಿ. ಸ್ಥಳ : ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನ. ಬೆ.10.30 ಕ್ಕೆ.

■ **ಅಲುಮ್ನಿ ಅಸೋಸಿಯೇಷನ್ ಕೃಷಿ ವಿವಿ:** 2024-25 ನೇ ಸಾಲಿನ ರಾಜ್ಯಮಟ್ಟದ ಕೃಷಿ ಪ್ರಶಸ್ತಿಗಳ ಪ್ರದಾನ ಸಮಾರಂಭ. ಅತಿಥಿಗಳು: ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಶಂಕರ್ ಬಿದರಿ, ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್, ಅಲುಮ್ನಿ ಅಸೋಸಿಯೇಷನ್ ಅಧ್ಯಕ್ಷ ಎಚ್.ಎಲ್.ಹರೀಶ್, ಎನ್.ಸಿ.ಮುನಿಯಪ್ಪ, ಸ್ಥಳ : ಅಲುಮ್ನಿ ಅಸೋಸಿಯೇಷನ್, ಕೃಷಿ ವಿಶ್ವವಿದ್ಯಾಲಯ, ಪಶುವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆ.10.30 ಕ್ಕೆ.

Udayavani Pg 04

V-karnataka pg 05

ಕೃಷಿ ಹೊಂಡ ಪ್ರಸ್ತುತಿ 13ಕ್ಕೆ

ಧಾರವಾಡ: ನೀರಿನ ಸಮಸ್ಯೆ ನೀಗಿಸಲು ಹಮ್ಮಿಕೊಂಡ ಕರ್ನಾಟಕದ ಕೃಷಿ ಭಾಗ್ಯ ಯೋಜನೆ(ಕೃಷಿ ಹೊಂಡ) ಹೆಚ್ಚು ಗಮನ ಸೆಳೆದಿದ್ದು, ಈ ಯೋಜನೆ ವಿವರವನ್ನು ನಮ್ಮ ಅಧಿಕಾರಿಗಳು ಅ.13ರಂದು ರಾಷ್ಟ್ರಮಟ್ಟದಲ್ಲಿ ಪ್ರಸ್ತುತಪಡಿಸಲಿ ದ್ದಾರೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಹರ್ಷ ವ್ಯಕ್ತಪಡಿಸಿದರು.

ಕೃಷಿ ವಿವಿ 39ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಶುಕ್ರವಾರ ಉದ್ಘಾಟಿಸಿ,''ರಾಷ್ಟ್ರೀಯ ಅಗ್ರಿಕಲ್ಚರ್ ಫ್ರೂಟ್ ಆರ್ಗನೈಜೇಷನ್ ಸಂಸ್ಥೆಗೆ ರಾಷ್ಟ್ರದ ಎಲ್ಲ ರಾಜ್ಯಗಳು ಒಂದೊಂದು ಯೋಜನೆ ಕಳುಹಿಸಿದ್ದವು. ರಾಜ್ಯ ಸರಕಾರ ಕಳುಹಿಸಿದ ಕೃಷಿ ಹೊಂಡ ಯೋಜನೆಯನ್ನು ಸಂಸ್ಥೆ ಆಯ್ಕೆ ಮಾಡಿರುವುದು ಹೆಮ್ಮೆ ತಂದಿದೆ,'' ಎಂದರು.''ರಾಜ್ಯ ಸರಕಾರ ಕೃಷಿ ಹೊಂಡ ನಿರ್ಮಾಣಕ್ಕೆ ಇದ್ದ ಮಿತಿ ತೆಗೆದು ಹಾಕಿದೆ. ಅಚ್ಚುಕಟ್ಟು ಪ್ರದೇಶ ನೇರಿದಂತೆ ರಾಜ್ಯದ 224 ಕ್ಷೇತ್ರಗಳಲ್ಲಿಯೂ ಕೃಷಿ ಹೊಂಡ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ದೇಶನ ನೀಡಲಾಗಿದೆ. ಕಳೆದ 2 ವರ್ಷಗಳಲ್ಲಿ 24 ಸಾವಿರ ಕೃಷಿ ಹೊಂಡ ನಿರ್ಮಾಣ ಗೊಂಡಿವೆ,'' ಎಂದು ವಿವರಿಸಿದರು.

''ರೈತರಿಗೆ ಹೈಟೆಕ್ ಹಾರ್ವೆಸ್ಟಿಂಗ್ ಮಸೀನ್‌ಗಳಿಗೆ (ಸಾಮಾನ್ಯರಿಗೆ 40 ಲಕ್ಷ, ಎಸ್‌ಸಿ/ಎಸ್‌ಟಿ 50 ಲಕ್ಷ) ಕರ್ನಾಟಕ ಸರಕಾರ ಸಬ್ಸಿಡಿ ನೀಡುತ್ತಿದೆ. ಇಡೀ ದೇಶದಲ್ಲಿಯೇ ಇಷ್ಟೊಂದು ಸಬ್ಸಿಡಿ ಎಲ್ಲಿಯೂ ಇಲ್ಲ. 2 ವರ್ಷಗಳಲ್ಲಿ 400 ಯಂತ್ರಗಳನ್ನು ರಿಯಾಯಿತಿ ದರ ನೀಡಲಾಗಿದೆ,'' ಎಂದರು.

3 ಕೃಷಿ ಕಾಲೇಜುಗಳು: ''ಕೃಷಿ ಪದವಿಗೆ ಹೆಚ್ಚುತ್ತಿರುವ ಬೇಡಿಕೆ ಗಮನದಲ್ಲಿಟ್ಟುಕೊಂಡು ಇದೇ ಪ್ರಥಮ ಬಾರಿಗೆ ರಾಜ್ಯದಲ್ಲಿ 3 ಖಾಸಗಿ ಕೃಷಿ ವಿಜ್ಞಾನ ಕಾಲೇಜ್ ಆರಂಭಕ್ಕೆ ರಾಜ್ಯ ಸರಕಾರ ಒಪ್ಪಿಗೆ ನೀಡಿದೆ,'' ಎಂದರು. ''ರಾಜ್ಯದ ಕೃಷಿ ವಿವಿಗಳು ರಾಷ್ಟ್ರಕ್ಕೆ ಮಾದರಿಯಾಗುವ ಸಂಶೋ ಧನೆ ಕೈಗೊಂಡು ಬೀಜದ ತಳಿಗಳನ್ನು ಸಂಶೋಧಿಸಿವೆ. ವಿಶೇಷವಾಗಿ ಧಾರವಾಡ ಮತ್ತು ಬೆಂಗಳೂರು ಕೃಷಿ ವಿವಿ ಹೆಚ್ಚು ಶ್ರಮ ವಹಿಸಿವೆ. ಧಾರವಾಡ ಕೃಷಿ ವಿವಿ ಭಾರತೀಯ ಕೃಷಿ ಸಂಶೋಧನಾ ಮಂಡಳಿಯಿಂದ ಎ ದರ್ಜೆ ಮಾನ್ಯತೆ ಪಡೆದಿದೆ,'' ಎಂದರು.

ಡಾ.ಜಿ.ಕುರುಣಾಕರನ್‌ಗೆ ಡಾ.ಕಾಳಯ್ಯ ರಾಷ್ಟ್ರೀಯ ಪ್ರಶಸ್ತಿ ಪ್ರದಾನ



V-karnataka pg 08

ಬೆಂಗಳೂರು: ಐಸಿಎಆರ್-ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಹಾರ್ಟಿಕಲ್ಚರಲ್ ರಿಸರ್ಚ್ (ಐಸಿಎಆರ್-ಐಐಎಚ್‌ಆರ್) ಹಣ್ಣು ಬೆಳೆ ವಿಭಾಗದ ಪ್ರಧಾನ ವಿಜ್ಞಾನಿ (ತೋಟಗಾರಿಕೆ) ಡಾ.ಜಿ. ಕರುಣಾಕರನ್ 2024ರ ಡಾ.ಕಾಳಯ್ಯ ಕೃಷ್ಣಮೂರ್ತಿ ರಾಷ್ಟ್ರೀಯ ಪ್ರಶಸ್ತಿಗೆ ಪಾತ್ರವಾಗಿದ್ದಾರೆ.

ಬೆಂಗಳೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯ (ಯುಎಎಸ್‌ಬಿ) ನೀಡುವ ಈ ಪ್ರಶಸ್ತಿಯನ್ನು ಗುರುವಾರ ಗೃಹ ಸಚಿವ ಡಾ.ಜಿ. ಪರಮೇಶ್ವರ ಪ್ರದಾನ ಮಾಡಿದರು. ಕರುಣಾಕರನ್ ಅವರು ತೋಟಗಾರಿಕೆ ಬೆಳೆ ಸಂಶೋಧನೆ, ಆನುವಂಶಿಕ ಸುಧಾರಣೆ ಮತ್ತು ಮೌಲ್ಯ ಸರಪಳಿ ಅಭಿವೃದ್ಧಿಗೆ ನೀಡಿದ ಕೊಡುಗೆಯನ್ನು ಪರಮೇಶ್ವರ್ ಕೊಂಡಾಡಿದರು. ಗುರುವಾರ ಕೃಷಿ ವಿಶ್ವವಿದ್ಯಾಲಯದ 60ನೇ ಸಂಸ್ಥಾಪನಾ ದಿನಾಚರಣೆಯಾಗಿತ್ತು ಎಂಬುದು ವಿಶೇಷ.

ಭಾರತೀಯ ಕೃಷಿ ಸಂಶೋಧನಾ ಮಂಡಳಿಯಲ್ಲಿ (ಐಸಿಎಆರ್) 26 ವರ್ಷ ಸೇವೆ ಸಲ್ಲಿಸಿದ್ದ ಡಾ. ಕರುಣಾಕರನ್ ಅವರು ಬಾಳೆಹಣ್ಣು, ಪಪ್ಪಾಯಿ, ಹಲಸಿನ ಹಣ್ಣು, ಡ್ರ್ಯಾಗನ್ ಹಣ್ಣು, ಆವಕಾಡೊ, ರಾಂಬುಟಾನ್, ಕೂರ್ಗ್ ಮ್ಯಾಂಡರಿನ್ ಮತ್ತು ಹುಣಸೆ ಸೇರಿದಂತೆ ಹಲವಾರು ಹಣ್ಣಿನ ಬೆಳೆಗಳ ಸುಧಾರಣೆ ಮತ್ತು ವಾಣಿಜ್ಯೀಕರಣಕ್ಕೆ ಹೆಚ್ಚಿನ ಕೊಡುಗೆ ನೀಡಿದ್ದಾರೆ. ಡಾ.ಕರುಣಾಕರನ್ ಅವರು 40 ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳು, ಮೂರು ಪುಸ್ತಕಗಳನ್ನು ರಚಿಸಿದ್ದಾರೆ.

ಆವಕ ಕುಸಿತದಿಂದ ದುಬಾರಿ ಬೆಲೆ ಕಂಡುಕೊಂಡ ಕಂಗು । ಕ್ವಿಂಟಲ್‌ಗೆ 65 ಸಾವಿರ ರೂ.ದಾಟಿದ ದರ

ಬೆಲೆಗೆ ಶುಕ್ರದೆಸೆ, ಅಡಕೆಗೆ ಅಧಿಕ ಮಾಸ

■ ಯಳನಾಡು ಮಂಜು ದಾವಣಗೆರೆ
manjunath.lokanath@timesofindia.com

ದುಡ್ಡಿನ ಬೆಳೆ ಅಡಕೆ ಬೆಲೆ ಏರುಗತಿಯಲ್ಲಿದ್ದು ಕ್ವಿಂಟಲ್‌ಗೆ 65 ಸಾವಿರ ರೂ. ದಾಟಿದೆ. ಈ ಹೊತ್ತಿಗೆ ಹೊಸ ಆವಕ ಮಾರುಕಟ್ಟೆಗೆ ಕಾಲಿಟ್ಟು ಬೆಲೆ ಮೇಲೆ ಪರಿಣಾಮ ಬೀಳುತ್ತಿತ್ತು. ಆದರೀಗ ಅಡಕೆ ಬೆಳೆಗೆ ಅಧಿಕ ಮಾಸ ಎಂಬಂತಾಗಿದ್ದು, ಕೊಯ್ಲು ಕೂಡ ಒಂದು ತಿಂಗಳು ಮುಂದಕ್ಕೆ ಹೋಗಿ ಹೊಸ ಅಡಕೆ ಮಾರುಕಟ್ಟೆಗೆ ಬಾರದೆ ಬೆಲೆ ಏರಿಕೆಗೆ ಕಾರಣವಾಗಿದೆ ಎಂಬ ವಿಶ್ಲೇಷಣೆ ಕೇಳಿ ಬರುತ್ತಿದೆ.

ಅಕ್ಟೋಬರ್ ತಿಂಗಳಿಗೂ ಮುನ್ನ ಆವಕ ಇಲ್ಲದೆ ಅಡಕೆ ಬೆಲೆ ಕೊಂಚ ಏರಿಕೆ ಆಗುತ್ತಿತ್ತು. ಆದರೆ, ಹೊಸ ಅಡಕೆ ಮಾರುಕಟ್ಟೆಗೆ ದಾಂಗುಡಿಯಿಟ್ಟ ನಂತರ ಅಕ್ಟೋಬರ್ ತಿಂಗಳ ಹೊತ್ತಿಗೆ ಬೆಲೆ ಇಳಿಕೆ ಆಗುವ ಪರಂಪರೆ ಈವರೆಗೂ ಇತ್ತು. ಆದರೆ, ಈ ವರ್ಷ ಈ ಪರಂಪರೆ ಮುರಿದಿದೆ. ಅಕ್ಟೋಬರ್ ತಿಂಗಳು ಬಂದರೂ ಬೆಲೆ ಇಳಿಯದೆ ಏರಿಕೆ ಆಗುತ್ತಿದೆ. ಮಾರುಕಟ್ಟೆಯಲ್ಲಿ ಶುಕ್ರವಾರ ಕ್ವಿಂಟಲ್ ರಾಶಿ ಅಡಕೆ ಬೆಲೆ ಗರಿಷ್ಠ 65,069 ರೂ. ಮುಟ್ಟಿದೆ. ಸರಾಸರಿ ಒಟ್ಟು ಬೆಲೆ 62,800 ರೂ. ದಾಖಲಾಗಿದ್ದು ಇನ್ನೂ ಬೆಲೆ ಏರಿಕೆ ಆಗಬಹುದು ಎಂದು ಮಾರುಕಟ್ಟೆ ಮೂಲಗಳು ಹೇಳುತ್ತವೆ. ಈ ನಡುವೆ ಕ್ವಿಂಟಲ್ ಹಸಿ ಅಡಕೆ ಬೆಲೆ ಸಹ 7,700 ರೂ. ಮುಟ್ಟಿದೆ.

ಅಡಕೆ ಇಲ್ಲ: ಬಯಲು ಸೀಮೆಯಲ್ಲಿ ಜುಲೈ ಕೊನೇ ವಾರ ಅಥವಾ ಆಗಸ್ಟ್ ಮೊದಲ ವಾರದಲ್ಲಿ ಅಡಕೆಯ ವರ್ಷದ ಮೊದಲ ಕೊಯ್ಲು ಆರಂಭವಾಗುತ್ತಿತ್ತು. ಆದರೆ ಈ ವರ್ಷ ಅಡಕೆ ಮಾಗುವುದು ತಡವಾದ್ದರಿಂದ ಕೊಯ್ಲು ಕೊಂಚ ವಿಳಂಬವಾಗಿದೆ. ಅಕ್ಟೋಬರ್ ತಿಂಗಳಲ್ಲಿ ಸಾಮಾನ್ಯವಾಗಿ ಹೊಸ ಅಡಕೆ ದೊಡ್ಡ ಮಟ್ಟದಲ್ಲಿ ಮಾರುಕಟ್ಟೆಗೆ ದಾಂಗುಡಿಯಿಡುತ್ತಿತ್ತು. ಆದರೆ ಈ ವರ್ಷ ಬದಲಾಗಿದೆ. ತೋಟಗಳಲ್ಲಿ ಅಕ್ಟೋಬರ್ ಮೊದಲ ವಾರದ ಹೊತ್ತಿಗೆ ಎರಡನೇ ಕೊಯ್ಲು ಕೂಡ ಮುಗಿಯುವ ಹಂತದಲ್ಲಿರುತ್ತಿತ್ತು. ಆದರೆ ಈ ವರ್ಷ ಇನ್ನೂ ಮೊದಲ ಕೊಯ್ಲು ಮುಗಿದು ಎರಡನೇ ಕೊಯ್ಲು ಈಗ ಶುರುವಾಗಿದೆ.

ಜತೆಗೆ ಉತ್ತಮ ಬೆಲೆ ಇರುವ ಕಾರಣಕ್ಕೆ ಎಲ್ಲರೂ ಅಡಕೆ ಮಾರಾಟ ಮಾಡಿರುವುದರಿಂದ ಹಳೇ ಅಡಕೆಯ ದಾಸ್ತಾನು ಇಲ್ಲ, ಹಾಗಾಗಿ ಅಡಕೆ ಡಿಮ್ಯಾಂಡ್‌ಗೆ ತಕ್ಕಂತೆ ಮಾರುಕಟ್ಟೆಯಲ್ಲಿ ಆವಕ ಇಲ್ಲ, ಈ ಕಾರಣಕ್ಕೆ ಬೆಲೆ ಏರುಗತಿಯಲ್ಲಿ ಸಾಗಿದೆ ಎಂದು ಹೇಳಲಾಗುತ್ತಿದೆ. ಆದರೂ ಬೆಲೆ 65 ಸಾವಿರ ರೂ. ದಾಟಿರುವುದು ಉತ್ತಮ ಬೆಳವಣಿಗೆಯಾಗಿದ್ದು, ಅಡಕೆ ಬೆಳೆಗಾರರು ಖುಷಿ ವ್ಯಕ್ತಪಡಿಸುತ್ತಿದ್ದಾರೆ. ಇದೇ ಬೆಲೆ ಮುಂದುವರಿಯಲಿ ಎಂದು ಆಶಿಸುವವರ ಜತೆಗೆ, ಬೆಲೆ ಇನ್ನೂ ಏರಿಕೆ ಆಗಲಿದೆ ಎಂದು ಆಶಾಭಾವ ವ್ಯಕ್ತಪಡಿಸುವವರೂ ಇದ್ದಾರೆ. ಒಟ್ಟಾರೆ ಅಡಕೆಗೆ ಉತ್ತಮ ಬೆಲೆಯಿದ್ದು ಅಡಕೆ ಬೆಳೆಗಾರರ ಖಜಾನೆ ಇನ್ನಷ್ಟು ಭರ್ತಿ ಆಗಲಿದೆ.





ಚನ್ನಗಿರಿಯಲ್ಲಿರುವ ಅಡಕೆ ತೋಟ(ಮೊದಲ ಚಿತ್ರ). ಚನ್ನಗಿರಿಯ ರೈತರೊಬ್ಬರ ಮನೆಯ ಮುಂದೆ ಒಣಗಲು ಹರಡಿರುವ ರಾಶಿ ಅಡಕೆ.

ರಾಜ್ಯದ ಅಡಕೆ ಬೆಳೆ

ವರ್ಷ	ಪ್ರದೇಶ	ಉತ್ಪನ್ನ
2023-24	6,91,554 ಹೆ.	9,46,109 ಮೆ.ಟನ್
2024-25	7,55,674	10,71,456

ಅಡಕೆಗೆ ಬೇಡಿಕೆ ಇದೆ, ಆದರೆ ಮಾರುಕಟ್ಟೆಯಲ್ಲಿ ಆವಕವೇ ಇಲ್ಲ. ಈ ಹಿಂದಿನಂತೆ ಅಡಕೆ ಸಂಸ್ಥೆಗಳಲ್ಲಿ ರೈತರ ಅಡಕೆಯೂ ಸ್ಟಾಕ್ ಇಲ್ಲ, ಹಾಗಾಗಿ ಬೆಲೆ ಏರಿಕೆ ಆಗುತ್ತಿದ್ದು ಪರಿಣಾಮ ಕಾದು ನೋಡಬೇಕು.
-ಶಿವಕುಮಾರ್ ಅಧ್ಯಕ್ಷರು, ದಾಮ್ಕೋಸ್

V-karnataka pg 05

Dec Hrd Pg 09

From fields to flight: When women farmers turn to drones

In Koppal's paddy fields, drones are emerging as a symbol of technological progress and women's empowerment, writes Pramod Kulakarni

Standing confidently on a field bund in Koppal's Gangavathi, Mahadevi Chandrashekhar pilots a drone buzzing high above the lush green paddy fields. The unusual sight draws the attention of villagers and passersby alike, as people pause to watch the flight of drones and the person skillfully controlling it.

Agricultural work is nothing new for Mahadevi. But her drone skills have sparked a sense of wonder and admiration in her village.

In Gangavathi and surrounding areas, the hum of drones is slowly becoming a familiar sound in the vast paddy fields.

Mahadevi, who hails from Chikkajantakal near Gangavathi, owns a modest rice mill and runs a bank that preserves organic seeds. A seasoned paddy cultivator, she has conserved 80 paddy varieties and developed 10 varieties. Though her formal education ended after SSLC, her ambitions reach far beyond managing the seed bank and farm work.

A couple of years ago, Mahadevi underwent specialised training in Chennai and Hyderabad to operate drones for spraying liquid fertilisers and pesticides under a union government scheme.

The agricultural sector in the region has faced increasing labour shortages over the years. Recognising this challenge, Mahadevi decided to use drones to fill the gap.

Today, she earns Rs 350 to Rs 400 per acre for the drone services she offers. She leads a financially independent life and promotes drone technology among other farmers in the area.

The 'twelve sisters'

Shanta from Mushtur village in Gangavathi taluk shares a similar inspiring journey. Having studied PUC and equipped with extensive farming experience, she manages two acres of leased farmland. Though two decades have passed since she left college, her zeal for adopting new agricultural technologies remains undiminished.

Working as a Krishi Sakhi (farming facilitator) in her gram panchayat, Shanta is also trained in drone operations. She is among the 12 women from Koppal district certified in drone piloting. Others include Nagaratna A and Tulasi Nekkanti from the nearby Marali village, and women from Kukanoor taluk.

Thirty-two-year-old Tulsi Nekkanti, who won a national award last year for implementing drone technology in the state, has covered around 1,500 acres of land in Gangavathi area in the last one year.

"I get orders throughout the year except in April and May. In a day, we cover around 30 to 35 acres of land using a drone. When done manually, a person can cover a maximum of 10 acres," said Tulsi.

Situated in the irrigated Tungabhadra command area, Gangavathi and surrounding villages have vast tracts of paddy fields. However, excessive use of pesticides and fertilisers has resulted in air and water pollution, degrading soil fertility. The drone operators feel that drone-based spraying could offer an effective solution to this problem.

According to them, drone spraying delivers the fertilisers in microdroplet form directly onto leaves, ensuring uniform coverage and healthier crops.

"During this year's kharif season, nearly 7,000 acres of land were covered using drones. We are planning to encourage more women to start piloting drones, by getting more drones through state funds," said Joint Director of Agriculture Rudreshappa T S.

"Watching drones at fairs and other events sparked my desire to learn piloting. I travelled to distant places for training. Now, this skill has become a source of income for me," said Mahadevi.

Trained at aeronautics centres in Chennai and Hyderabad over the past year, Koppal's drone operators have begun practical applications with promising results.

Some have also received training in Mysuru. They are trained to spray pesticides and liquid fertilisers on paddy, maize, sunflower, pigeon pea, jowar and groundnut crops.

However, some agriculturists also express concerns regarding the use of drones in agriculture. "Drone technology in itself may not be harmful but we must be careful as using chemical fertilisers and pesticides is not a sustainable agriculture practice.

Also, there are chances that the fertiliser sprayed from the drone may accidentally enter nearby fields and harm them," said G Krishnaprasad, an agriculture expert.

(Translated from Kannada by Divyashri Mudakavi)



Hosadiganta pg 04



Drone operators Mahadevi and Tulasi Nekkanti handle drones to spray fertiliser in a paddy field in Koppal district. PHOTOS BY AUTHOR